(SMT. DYAVAMMA.)

Kavalu in Dudda Hobli, Hassan Taluk;

(*b*) whether they have received applications for supply of electric power to the Clay Works Factory, Bageshpur from the above place;

(*c*) (*i*) the number of villages in the area that are covered by the road between the Yogihalli Kavalu and the said factory;

(*ii*) the number of applications received from the residents of these villages for supply of irrigation pump sets;

(*iii*) the number of village panchayats which have requested them to supply power;

(*d*) the action taken or proposed to be taken thereon?

A.—Sri H. K. VEERANNA GOWDH (Minister for Public Works).—

(*a*) Yes.
(*b*) Yes.
(*c*) (*i*) (1) Jekkenahalli
(2) Chikkakadlur
(3) Dudda
(4) Honnenahalli
(5) Kittanakere
(6) Siddapura
(*ii*) None.
(*iii*) None.

(*d*) Does not arise in view of answer to (*c*) above.

Supply of Electric Power in Gandasi Area.

Q.—542. Srimathi DYAVAMMA (Gandasi).—

Will the Government be pleased to state :—

(*a*) the number of places from which applications have been received for supply of power and pumps to irrigation wells respectively in Gandasi, Bagur, Dudda and Dandiganahalli Hoblis;

(*b*) the number of Panchayats which have requested to provide the aforementioned facilities and the details of action taken in this regard?

A.—Sri H. K. VEERANNA GOWDH (Minister for Public Works).—

(*a*) Only the residents of Gandas village have asked for electrification. No applications have been received for power supply to irrigation pump sets.

(*b*) One. Electrification of Gandasi can be considered only after power supply to Bageshpura is arranged.

ಶ್ರೀ ಬಿ. ಎಕ್. ಜೋರಣ್ಣಗೌಡ.—ಈ ಊರಿನವರು ವಿದ್ಯುಚ್ಛಕ್ತಿ ಇಲಾಖೆಯವರನ್ನು ವಿದ್ಯುಚ್ಛಕ್ತಿ ಸರಬರಾಯಿ ಮಾಡಬೇಕೆಂದು ಎಷ್ಟು ದಿವಸದಿಂದ ಕೇಳುತ್ತಿದ್ದಾರೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವ ಊರಿನವರು?

ಶ್ರೀ ಬಿ. ಎಕ್. ಜೋರಣ್ಣಗೌಡ.—ಜಕ್ಕೇನಹಳ್ಳಿ, ಚಿಕ್ಕಡೂರ್, ದುದ್ದ, ಹೊನ್ನೇನಹಳ್ಳಿ, ಮುಂತಾದ ಹಳ್ಳಿಗಳವರು.

ಶ್ರೀ ಎಚ್. ಕೆ. ವೀರಣ್ಣಗೌಡ.—ಅವರು ವಿದ್ಯುಚ್ಛಕ್ತಿ ಬೇಕೆಂದು ಕೇಳಿಯೇ ಇಲ್ಲವೆಂದು ಉತ್ತರದಲ್ಲೇ ಹೇಳಿದೆ.

ಶ್ರೀ ಬಿ. ಎಕ್. ಜೋರಣ್ಣಗೌಡ.—ಈ ಹಳ್ಳಿಯವರು ನೂಪರಿಂಚೆಂಡಿಂಗ್ ಎಂಜಿನಿಯರಿಗೆ ಅನೇಕ ಸ್ಸಾರಿ ಅರ್ಜಿಗಳನ್ನು ಕೊಟ್ಟಿದ್ದಾರೆಂಬುದು ಗೊತ್ತಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—'ಇಲ್ಲ' ಎಂದು ಉತ್ತರದಲ್ಲೇ ಹೇಳಿದ್ದೇನೆ. ಆದರೂ ಬಾಗೇಶಪುರಕ್ಕೆ ವಿದ್ಯುಚ್ಛಕ್ತಿ ಕೊಡಬೇಕೆಂದಿದೆ; ಆ ಸಂದರ್ಭದಲ್ಲಿ ದಾರಿಯಲ್ಲಿರತಕ್ಕ ಈ ಹಳ್ಳಿಗಳವರಿಗೆಲ್ಲಾ ಅವರು ಕೇಳದೆ ಇದ್ದರೂ ಅರ್ಜಿ ಫಾರಮ್ಮುಗಳನ್ನು ಕಳುಹಿಸಿ ಕೊಟ್ಟು ಫಾರಂ ಭರ್ತಿಮಾಡಿ ಕಳುಹಿಸಿಕೊಡ ಬೇಕೆಂದು ಹೇಳಿದೆ.

ಶ್ರೀ ಎಕ್. ಜಿ. ನರಸಿಂಹೇಗೌಡ.—ಈ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡ ವುದು ಯಾವ ಯೋಜನೆಯಲ್ಲಿ ಸೇರಿಕೊಂಡಿದೆ, ಯಾವ ಯೋಜನೆಯನ್ನು ಇದಕ್ಕಾಗಿ ಹಾಕಿದ್ದೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾನಾಗಲೇ ಹೇಳಿದಂತೆ, ಬಾಗೇಶಪುರಕ್ಕೆ ವಿದ್ಯುಚ್ಛಕ್ತಿ ಕೊಡ ಬೇಕೆಂದಿದೆ. ಅದರ ಸಂದರ್ಭದಲ್ಲೇ ಇದನ್ನು ಸೇರಿಸಿ ಕೊಂಡು, ಈ ಹಳ್ಳಿಗಳವರಿಗೆಲ್ಲಾ Load Form ಭರ್ತಿ ಮಾಡಿ ಕಳುಹಿಸಬೇಕೆಂದು ಹೇಳಿದ್ದೇವೆ. ಅವರು ಭರ್ತಿಮಾಡಿಕೊಟ್ಟು ಮಿನಿಮಂ ಗ್ಯಾರಂಟಿ ಕೊಟ್ಟರೆ ಅಲ್ಲಿಗೂ ಏರ್ಪಾಡು ಮಾಡುತ್ತೇವೆ. ಇಲ್ಲದಿದ್ದರೆ, ಅವನ್ನು ಬಿಟ್ಟು ಬಿಟ್ಟು ಸೀದಾ ಬಾಗೇಶಪುರಕ್ಕೆ ಕೊಡುತ್ತೇವೆ.

ಶ್ರೀ ಎಕ್. ಜಿ. ನರಸಿಂಹೇಗೌಡ.—ಹಾಗಾದರೆ ಎಸ್ಟಿಮೇಟ್ ಯಾವಾಗ ತಯಾರು ಮಾಡುತ್ತೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎಸ್ಟಿಮೇಟೂ ಇಲ್ಲ, ಅರ್ಜಿಯೂ ಇಲ್ಲ, ನಾವೇ ಕೇಳಿದ್ದೇವೆ.

ಶ್ರೀ ಎಕ್. ಜಿ. ನರಸಿಂಹೇಗೌಡ.—ಹಾಗಾದರೆ ಅಲ್ಲಿಂದ ಬಂದ ಕೂಡಲೆ ಸೀದಾ ಸ್ಯಾಂಕ್ಷನ್ ಮಾಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು, ಅವರು ಕೇಳಬೇಕಾಗಿಯೇ ಇಲ್ಲ.

3 P.M.

ಶ್ರೀ ಡಿ. ಟಿ. ಸೀತಾರಾಮರಾವ್.—ಸರ್ಕಾರದವರು ಸರಿಯಾದ ಅರ್ಜಿ ಫಾರಂಗಳನ್ನೇ ಸರಬರಾಯಿ

ಮಾಡಿಲ್ಲ. ಹಾಗೆ ನರಬರಾಯಿ ಮಾಡದಿರುವಾಗ ಜನರೇ ಅರ್ಜಿ ಬರೆದುಕೊಟ್ಟರೆ ಅದನ್ನು ಅವರು ಮಂಜೂರುಮಾಡುತ್ತಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ವಿದ್ಯುಚ್ಛಕ್ತಿಯನ್ನು ಕೇಳತಕ್ಕ ಜನರು ತಾವು ಅನುಸರಿಸಬೇಕಾಗಿರುವ ಕ್ರಮವನ್ನು ಸರಿಯಾಗಿ ಅನುಸರಿಸುತ್ತಿಲ್ಲವಾದುದರಿಂದ ಕೆಲಸಗಳು ನಿಧಾನವಾಗುತ್ತಿವೆ. ಅವರು ಮೊದಲು ತಾಲ್ಲೂಕು ಅಮಲ್ದಾರರಿಗೆ ಅರ್ಜಿ ಕೊಡಬೇಕು. ಅನಂತರ ಅದು ಜಿಲ್ಲಾಧಿಕಾರಿಗಳಿಂದ ಕೌಂಟರ್‌ಸೈನ್ ಆಗಿ ಬರಬೇಕು. ಹೀಗೆಲ್ಲ ಕೆಲವು ನಿಯಮಗಳಿವೆ.

Implementation of the Prevention of Animal Sacrifices Act.

Q.—539. **Sri T. HANUMIAH** (Challakere—Scheduled Castes).—

Will the Government be pleased to state :—

(*a*) when the prevention of Animal Sacrifices Act came into force in the State ;

(*b*) whether it has come to their notice that the practice of slaughtering animals before the deities in villages still continues;

(*c*) whether it has come to their notice that while worshipping the village deities animals are slaughtered without obtaining licence ?

A.—**Sri H. S. RUDRAPPA** (Minister for Agriculture).—

(*a*) With effect from 25th July 1948.

(*b*) No.

(*c*) No.

Extension of the Mysore Prevention of Cow Slaughter Act and the Mysore Prevention of Animal Sacrifices Act to Bellary District.

Q.—341. **Sri M. GANGAPPA** (Bellary).—

Will the Government be pleased to state :—

(*a*) the reasons for cancellation of the notification appointing 1st November 1956, as the date on which the two Acts, *viz.*, the Mysore Prevention of Cow Slaughter Act L of 1948 and the Mysore Prevention of Animal Sacrifices Act LI of 1948, would be extended to Bellary District;

(*b*) whether they are intending to extend the two Acts immediately to Bellary District even now ?

A.—**Sri H. S. RUDRAPPA** (Minister for Agriculture).—

(*a*) Representations were received that the extension of the operation of the two Acts may be postponed.

(*b*) The question is under consideration.

ಶ್ರೀ ಟಿ. ಹನುಮಯ್ಯ.—ಸ್ವಾಮಿ, ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರು 1948ನೇ ಜುಲೈ 25ನೇ ತಾರೀಖು ಎಂತ ಉತ್ತರ ಕೊಡುತ್ತಾ..

ಶ್ರೀ ಎಚ್. ಎಸ್. ರುದ್ರಪ್ಪ.—ಆ ತಾರೀಖು ಹಳೆಯ ಮೈಸೂರು ದೇಶಕ್ಕೆ ಸಂಬಂಧಪಟ್ಟಿದ್ದು.

ಶ್ರೀ ಟಿ. ಹನುಮಯ್ಯ.—ಇಂಥ ಒಂದು ಕಾನೂನು ದೇಶದಲ್ಲಿ ಜಾರಿಯಲ್ಲಿದೆ ಎನ್ನತಕ್ಕ ವಿಚಾರ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪಟೇಲ್ ಶಾನುಭೋಗರುಗಳಿಗೆ ಗೊತ್ತಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ದೇಶಾದ್ಯಂತ ದಲ್ಲಿರತಕ್ಕ ಜನರಿಗೆಲ್ಲಾ ಗೊತ್ತಿದೆ.

ಶ್ರೀ ಟಿ. ಹನುಮಯ್ಯ.—ಅನೇಕ ಗ್ರಾಮಗಳಲ್ಲಿ ಯಾವ ಲೈಸೆನ್ಸ್‌ವಗೈರೆಗಳೂ ಇಲ್ಲದೆ ಜಾತ್ರೆಗಳು ನಡೆಸಲ್ಪಡುತ್ತವೆ ಎಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಗೊತ್ತಿಲ್ಲ. Hon'ble Member also has not brought to our notice.

ಶ್ರೀ ಟಿ. ಹನುಮಯ್ಯ.—ಪೋಲೀಸಿನವರೇ ಗ್ರಾಮಗಳಿಗೆ ಹೋಗಿ ಲೈಸೆನ್ಸ್ ಇಲ್ಲದಿದ್ದರೂ ಜಾತ್ರೆಗಳನ್ನು ನಡೆಸುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ.

ಶ್ರೀ ಜಿ. ದುಗ್ಗಪ್ಪ.—ಈ ಆಕ್ಟ್ ಪ್ರಕಾರ ಎಷ್ಟು ಜನರಮೇಲೆ ಅಪರಾಧ ಹಾಕಲಾಗಿತ್ತು ?

ಶ್ರೀ ಎಚ್. ಎಸ್. ರುದ್ರಪ್ಪ.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಪ್ರಾಣಿವಧೆ ಮಾಡಲು ಸರ್ಕಾರಕ್ಕೆ ಅರ್ಜಿ ಹಾಕಿಕೊಂಡರೆ ಅಂಥವರಿಗೆ ಲೈಸೆನ್ಸನ್ನು ಮಂಜೂರು ಮಾಡಲಾಗುತ್ತದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಆಕ್ಟಿನಲ್ಲಿ ಲೈಸೆನ್ಸ್ ಕೊಡಲು ಅವಕಾಶವಿದ್ದರೆ ಕೊಡಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗೆ ಆಕ್ಟಿನಲ್ಲಿ ಅವಕಾಶವಿಲ್ಲವೆಂದು ಸರ್ಕಾರದವರು ಹೇಳುವುದಾದರೆ ಆಗ ಜನರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಂದಂತಾಗುವುದಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ.

ಶ್ರೀ ಟಿ. ಹನುಮಯ್ಯ.—ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕ ಅಮಲ್ದಾರರುಗಳಿಗೂ ಮತ್ತು ಗ್ರಾಮಗಳಲ್ಲಿರತಕ್ಕ ಪಟೇಲ್-ಶಾನುಭೋಗರುಗಳಿಗೂ ಈ ಆಕ್ಟಿನ ವಿಚಾರವೇ ಗೊತ್ತಿಲ್ಲವೆಂಬ ಅಂಶ ಸರ್ಕಾರದವರ ಅವಗಾಹನೆಗೆ ಬಂದಿದೆಯೇ ?